ಭಾರತ ಮತ ಮಹಾ ಸಮರ

ಸಮಾಚಾರ ಸಣ್ಣದಲ್ಲ

ಬಳ್ಳಾರಿಯಲ್ಲಿ ನಮ್ಮ ಗೆಲುವು ನಿಶ್ಚಿತ

ಬಳ್ಳಾರಿ: ಏ.26 ಕ್ಕೆ ರಾಹುಲ್ ಗಾಂಧಿ ಬಳ್ಳಾರಿ ನಗರಕ್ಕೆ ಬರ್ತಾರೆ. ಇದು ರಾಹುಲ್ ಗಾಂಧಿಯವರ ತಾಯಿಯವರ ಕ್ಷೇತ್ರವಾಗಿತ್ತು ಭಾರತ್ ಜೋಡೋ ಯಾತ್ರೆ ಸಹ ಬಳ್ಳಾರಿಯಲ್ಲಿ ಮಾಡಿದ್ದರು. ಬಳ್ಳಾರಿ ಉತ್ತರ ಕರ್ನಾಟಕದ ಹೆಬ್ಬಾಗಿಲು ಇಲ್ಲಿ ನಡೆಯುವ ಸಮಾವೇಶ ನಮಗೆ ಬಹಳ ಮುಖ್ಯ ಎಂದು ಸಚಿವ ನಾಗೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವೇದಿಕೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ, ಎಐಸಿಸಿ ಅಧ್ಯಕ್ಷರು ಬರಲಿದ್ದಾರೆ. ಜೊತೆಗೆ ಅವಳಿ ಜಿಲ್ಲೆಯ ಎಲ್ಲಾ ಶಾಸಕರು, ಕೊಪ್ಪಳದ ಅಭ್ಯರ್ಥಿ ಕೂಡ ಬರಲಿದ್ದಾರೆ ಸಮಾವೇಶಕ್ಕೆ ಲಕ್ಷಕ್ಕಿಂತ ಅಧಿಕ ಜನ ಸೇರಲಿದ್ದಾರೆ. ರಾಹುಲ್ ಗಾಂಧಿ ಬಂದು ಹೋದಲ್ಲೆಲ್ಲಾ ನಾವು ವಿಧಾನಸಭೇಲಿ ಗೆದ್ದಿದೀವಿ. ಈ ಚುನಾವಣೆ ನಮಗೆ ಪ್ರತಿಷ್ಠೆಯ ಚುನಾವಣೆ. ನಾವು ಸೋನಿಯಾಜಿ ಅವರ ನಂತರ ಇಲ್ಲಿ ಗೆದ್ದಿಲ್ಲ. ಇದೀಗ ನಾವೆಲ್ಲ ಸೇರಿ ಈ ಕ್ಷೇತ್ರವನ್ನು ಕಾಂಗ್ರೆಸ್ ಮಯ ಮಾಡಲು ಪಣ ತೊಟ್ಟಿದೀವಿ ಈ ಬಾರಿ ಗೆಲುವು ನಮಗೆ ನಿಶ್ಚಿತವಾಗಿದೆ ಎಂದು ಹೇಳಿದರು.

ಪ್ರಧಾನಿ ಮೋದಿ ವಿರುದ್ಧ ಕ್ರಮಕ್ಕೆ ಆಗ್ರಹ

ಗದಗ: ಕಳೆದ ಮೂರು ದಿನಗಳಿಂದ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲೆ ಮೀರಿ ಮಾತನಾಡುತ್ತಿದ್ದಾರೆ. ಸಾರ್ವಜನಿಕರಿಗೆ ಪ್ರಚೋದನೆ ನೀಡುವ ಹಾಗೂ ದ್ವೇಷ ಬಿತ್ತುವ ಅಂಶಗಳನ್ನು ಮಾತನಾಡುವ ಮೂಲಕ ದೇಶದಲ್ಲಿ ಕೋಮುಭಾವನೆ ಹುಟ್ಟುಹಾಕುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕೇಂದ್ರ ಚುನಾವಣಾ ಆಯೋಗವು ಸುಮೋಟೋ ಪ್ರಕರಣ ದಾಖಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ತಾಳಿ ಕಿತ್ತು ಮುಸಲ್ಮಾನರಿಗೆ ಕೊಡುತ್ತಾರೆ, ಹಿಂದುಗಳ ಆಸ್ತಿಯನ್ನು ಕಿತ್ತು ಮುಸಲ್ಮಾನರಿಗೆ ಹಂಚಿಕೆ ಮಾಡುತ್ತಾರೆ, ದಲಿತರ ಮೀಸಲು ಕಿತ್ತು ಅಲ್ಪಸಂಖ್ಯಾ ತರಿಗೆ ನೀಡುತ್ತಾರೆ ಎಂಬ ಹೇಳಿಕೆ ನೀಡುವ ಮೂಲಕ ದ್ವೇಷ ರಾಜಕಾರಣ ಮಾಡುತ್ತಿದ್ದಾರೆ. ಭಾರತ ಮಾತೆಯ ಆಭರಣಗಳಾದ ರೈಲ್ವೆ, ಏರ್‌ಪೋರ್ಟ್, ಗ್ಯಾಸ್‌ಲೈನ್‌ಗಳು, ಸ್ಟೇಡಿಯಂಗಳು, ರಸ್ತೆಗಳನ್ನು ದೋಚಿ ಶ್ರೀಮಂತರ ಪಾಲು ಮಾಡುತ್ತಿದ್ದಾರೆ ಎಂದರು.

ದೇವೇಗೌಡರ ಹೇಳಿಕೆ ಆಘಾತ ತಂದಿದೆ

ಬಾಗಲಕೋಟೆ: ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಿಗೆ ಕೃಷ್ಣಾ ನದಿ ನೀರು ಬಳಸಿಕೊಳ್ಳುವ ಕುರಿತು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಪ್ರಧಾನಿ ಮೋದಿ ಎದುರು ಪ್ರಸ್ತಾಪ ಮಾಡಿರುವುದನ್ನು ಕೇಳಿ ನಮ್ಮ ಭಾಗದ ಜನರಿಗೆ ದೊಡ್ಡ ಆಘಾತವಾಗಿದೆ ಎಂದು ಮಾಜಿ ಸಚಿವ ಎಸ್.ಆರ್ .ಪಾಟೀಲ ಹೇಳಿದರು.

ಸುದ್ದಿಗಾ ರರೊಂದಿಗೆ ಮಾತನಾಡಿ, ಚಿಕ್ಕಬಳ್ಳಾಪುರದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಹಾಗೂ ಜೆಡಿಎಸ್ ಸಮಾವೇಶದಲ್ಲಿ ಎಚ್‌ಡಿಡಿ ಮಾತನಾಡಿ, ರಾಜ್ಯದ 28 ಸ್ಥಾನ ಗೆದ್ದರೆ ಕಾವೇರಿ ಭಾಗದ ಜಿಲ್ಲೆಗಳ ನೀರಿನ ಬವಣೆ ಕಡಿಮೆ ಮಾಡಲು ಕೃಷ್ಣಾ ನದಿ ನೀರು ಬಳಸಿಕೊಳ್ಳಲು ಪ್ರಧಾನಿಯವರನ್ನು ಕೇಳೋಣ ಎಂದು ಹೇಳಿರುವುದನ್ನು ಕೇಳಿ ಮನಸ್ಸಿಗೆ ತುಂಬಾ ಬೇಜಾರಾಗಿದೆ. ಆಲಮಟ್ಟಿಯ ಆಣೆಕಟ್ಟಿನ ಎತ್ತರವನ್ನು 524.56 ಮೀಟರ್‌ಗೆ ಹೆಚ್ಚಿಸಿ 130 ಟಿಎಂಸಿ ನೀರನ್ನು ಬಳಕೆ ಮಾಡುವಂತೆ 11 ವರ್ಷಗಳ ಹಿಂದೆ ಸುಪ್ರೀಂ ಕೋರ್ಟ್‌ನಿಂದ ನ್ಯಾ.ಬ್ರಿಜೇಶಕುಮಾರ ಆದೇಶ ನೀಡಿದರೂ ಇಲ್ಲಿಯವರೆಗೆ ಅದನ್ನು ಪೂರ್ಣ ಪ್ರಮಾಣವಾಗಿ ಅನುಷ್ಠಾನಕ್ಕೆ ತರುವಲ್ಲಿ ಹಿಂದೆ ಬಿದ್ದಿದ್ದೇವೆ. ಕೃಷ್ಣೆ ವಿಚಾರದಲ್ಲಿ ಮಾತ್ರ ಒಗ್ಗಟ್ಟು ಪ್ರದರ್ಶಿಸಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಚುನಾವಣೆಗೆ ಸ್ಪರ್ಧಿಸುವುದಿಲ್ಲ

ಕಲಬುರಗಿ: ಮುಂಬರುವ ಚುನಾವಣೆಗೆ ಯಾವುದೇ ಕಾರಣಕ್ಕೂ ಸ್ಪರ್ಧಿಸುವುದಿಲ್ಲ. ಯಾರೇ ಹೇಳಿದರೂ ಚುನಾವಣೆಗೆ ನಿಲ್ಲೋದಿಲ್ಲ ಎಂದು ಅಫಜಲಪುರ ಕಾಂಗ್ರೆಸ್ ಪಕ್ಷದ ಶಾಸಕ ಎಂ.ವೈ. ಪಾಟೀಲ್ ಘೋಷಿಸಿದರು.

ಕಳೆದ ವಿಧಾ ನಸಭಾ ಚುನಾವಣೆ ಯಲ್ಲೇ ಸ್ಪರ್ಧಿಸದಿರಲು ಹಿಂದೇಟು ಹಾಕಿದ್ದೇ, ಆದರೆ ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಹಾಗೂ ಸಿಎಂ ಸಿದ್ದರಾ ಮಯ್ಯ ಇದೊಂದು ಸಲ ಸ್ಪರ್ಧಿಸಿ ಎಂದು ಹೇಳಿದ್ದ ರಿಂದ ಅನಿವಾರ್ಯ ವಾಗಿ ಸ್ಪರ್ಧಿಸಿದೆ. ಆದರೆ ಮುಂಬ ರುವ ಚುನಾವಣೆಗೆ ಸ್ಪರ್ಧಿಸುವುದಿಲ್ಲ, ಯುವಕರಿಗೆ ಸ್ಥಾನ ಬಿಟ್ಟು ಕೊಡಲಾಗುವುದು. ಈಗ ಮಾಲೀಕಯ್ಯ ಗುತ್ತೇದಾರ ಕಾಂಗ್ರೆಸ್ ಬಂದಿರುವುದು ಸಂತಸ ತಂದಿದೆ. ಯಾವು ದೋ ಕಾರಣಕ್ಕೆ ಪಕ್ಷ ಬಿಟ್ಟು ಹೋಗಿ ದ್ದರು. ಈಗ ಮರಳಿ ಬಂದಿದ್ದಾರೆ. ದೊಡ್ಡ ಶಕ್ತಿಯಾಗಿದೆ ಎಂದರು.

ವಿರಾಮ
ಪ್ರತಿ ಭಾನುವಾರ

ವಿನಾಕಾರಣ ಅಭಿವೃದ್ಧಿಯಾಗಿಲ್ಲವೆಂದು ಹೇಳುವುದು ಕಾಂಗ್ರೆಸ್ ನಾಯಕರಿಗೆ ಚಟವಾಗಿದೆ. ಕ್ಷೇತ್ರವನ್ನು ಅಭಿವೃದ್ಧಿ ಪಡಿಸದೇ ಇದಿದ್ದರಿಂದ ಏಳು ಹೆದ್ದಾರಿ, ವಿಮಾನಗಳು ವಿಜಯಪುರಕ್ಕೆ ಹೇಗೆ ಬರುತ್ತಿತ್ತು? ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಮತದಾರರು ತಮ್ಮ ಹಕ್ಕನ್ನು ಚಲಾಯಿಸಬೇಕು ಎಂದು ವಿಜಯಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂಸದ ರಮೇಶ ಜಿಗಜಿಣಗಿ ಅವರ ಆತ್ಮವಿಶ್ವಾಸದ ಮಾತುಗಳಾಗಿವೆ. ವಿಶ್ವವಾಣಿಗೆ ಅವರು ನೀಡಿದ ವಿಶೇಷ ಸಂದರ್ಶನದಲ್ಲಿ ವಿಜಯಪುರ ಲೋಕಸಭಾ ಮತಕ್ಷೇತ್ರದ ಪ್ರಸ್ತುತ ಚುನಾವಣೆಯ ಸ್ಥಿತಿಗತಿ, ಹಾಗೂ ಈ ಬಾರಿಯ ಚುನಾವಣಾ ಕಣದಲ್ಲಿ ತಮಗಿರುವ ಸವಾಲುಗಳ ಕುರಿತು ಮುಕ್ತವಾಗಿ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಈ ಕುರಿತ ಅವರ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ವಿನಾಕಾರಣ ಆರೋಪ ಮಾಡೋದು ಕಾಂಗ್ರೆಸ್‌ಗೆ ಚಟ

ವಿಶ್ವವಾಣಿ ಸಂದರ್ಶನ
ಬಸವರಾಜ್ ಎಸ್. ಉಳ್ಳಾಗಡ್ಡಿ, ವಿಜಯಪುರ

● ಜನ ಮತ್ತೆ ನಿಮಗೆ ಯಾಕೆ ಮತ ಹಾಕಬೇಕು?

ಬಿಜೆಪಿ ಸರಕಾರದಲ್ಲಿ ಮತ್ತು ನನ್ನ ಅವಧಿಯಲ್ಲಾದ ಅಭಿವೃದ್ಧಿ ವಿಚಾರಗಳನ್ನಿಟ್ಟುಕೊಂಡು, ಹಾಗೂ ನಾನೊಬ್ಬ ದಲಿತ ಸಮಾಜದ ನಾಯಕನಾಗಿ ಇಲ್ಲಿಯವರೆಗೂ ಸರ್ವ ಸಮಾಜಗಳೊಂದಿಗೆ ನಾನು ನಡೆದುಕೊಂಡ ಬಂದ ರೀತಿ ಗಮನಿಸಿ ಜನ ನನಗೆ ಮತ ಹಾಕಬೇಕೆಂದು ಕೋರುತ್ತೇನೆ. ಇಡೀ ಕ್ಷೇತ್ರದಲ್ಲಿ ಮುಂದುವರೆದ ಸಮಾಜಗಳಿಂದ ನನಗೆ ಯಾವುದೇ ವಿರೋಧಗಳಾಗಿಲ್ಲ, ನನ್ನ ಸುಮಾರು 45 ವರ್ಷಗಳ ರಾಜಕಾರಣದಲ್ಲಿ ಯಾರಿಗೂ ತೊಂದರೆ ಮಾಡಿಲ್ಲ, ಇಲ್ಲಿಯವರೆಗೂ ಒಂದೂ ಪಿಸಿಆರ್ ಆಕ್ಟ್ ಕೇಸ್ ಸಹ ಮಾಡಿಸಿಕೊಟ್ಟಿಲ್ಲ. ಕ್ಷೇತ್ರದ ಯಾವುದೇ ಹಳ್ಳಿಗಳಲ್ಲಿ ದಲಿತರು ಮತ್ತು ಮೇಲ್ವರ್ಗದ ಜನರ ನಡುವೆ ತೊಂದರೆಗಳಾದಾಗ ಮೇಲ್ವರ್ಗದ ಜನರಿಗೆ ಹೇಳಿಯೇ ಸಮಸ್ಯೆ ಸರಿಪಡಿಸಿದ್ದೇನೆ.

● ಮೂರು ಬಾರಿ ಸಂಸದರಾದರೂ ಸಂಸತ್ತಿನಲ್ಲಿ ಜಿಲ್ಲೆಯ ಪರವಾಗಿ ಧ್ವನಿಯೆತ್ತಿಲ್ಲ ಎಂಬ ಆರೋಪವಿದೆಯಲ್ಲ?

ವಿರೋಧಿಗಳು, ವಿರೋಧ ಪಕ್ಷಗಳ ಕೆಲಸವೇ ವ್ಯರ್ಥ ಆರೋಪ ಮಾಡುವುದು. ರಾಜ್ಯದಲ್ಲಿ ದಲಿತರಿಗೆ ಮೀಸಲಿಟ್ಟಿದ್ದ 25 ಸಾವಿರ ಕೋಟಿ ರುಪಾಯಿ ಎಸ್ಸಿಪಿ ಹಣ ರಾಜ್ಯ ಕಾಂಗ್ರೆಸ್ ಸರಕಾರ ದುರ್ಬಳಕೆ ಮಾಡಿಕೊಂಡಿದ್ದರೂ ಒಬ್ಬರೂ ಅದರ ಬಗ್ಗೆ ಧ್ವನಿ ಎತ್ತಲಿಲ್ಲ. ಖುದ್ದು ದಲಿತರಾಗಿರುವ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಲಿ, ವಿಜಯಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಲಿ ಯಾರೂ ಮಾತನಾಡಲಿಲ್ಲ. ಕಾಂಗ್ರೆಸ್ಸಿಗರು ಇಂತಹ ಕೆಟ್ಟ ಚಟ ಬಿಟ್ಟು, ತಾವೇನು ಮಾಡಿದ್ದಾರೆಂದು ಹೇಳಲಿ. ಇವರೇನೇ ಕುತಂತ್ರ ಮಾಡಿದರೂ ಜನ ನನ್ನ ಪರವಾಗಿರುವುದು ವಿರೋಧಿಗಳಲ್ಲಿ ಭಯ ಹುಟ್ಟಿಸಿದೆ. ಇನ್ನು ನನ್ನ ವಿಜಯಪುರ ಮತಕ್ಷೇತ್ರದ ಅಭಿವೃದ್ಧಿಗೆ ನಾನು ಇಲ್ಲಿವರೆಗೂ ಕೇಳಿದ ಎಲ್ಲವನ್ನು ಕೇಂದ್ರ ಬಿಜೆಪಿ ಸರಕಾರ ಕೊಟ್ಟಿದೆ. ಹಾಗಾಗಿ ಸದನದಲ್ಲಿ ಜಿಲ್ಲೆಯ ಬಗ್ಗೆ ಪ್ರಶ್ನೆ ಕೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ಇಲ್ಲಿವರೆಗೂ ಯಾವುದೇ ಮಂತ್ರಿಗೆ ಕಳುಹಿಸಿರುವ ಎಲ್ಲ ಪತ್ರಗಳಿಗೆ ಸ್ಪಂದನೆ ಸಿಕ್ಕಿದೆ. ಜಿಲ್ಲೆಯಲ್ಲಿ ಕೇವಲ ಒಂದು ರಾಷ್ಟ್ರೀಯ ಹೆದ್ದಾರಿ ಇತ್ತು, ಇಂದು 7 ರಾಷ್ಟ್ರೀಯ ಹೆದ್ದಾರಿಗಳಾಗಿವೆ. ರೈಲ್ವೆ ವ್ಯವಸ್ಥೆ ಸುಧಾರಣೆ, ಏರ್‌ಪೋರ್ಟ್ ಹೀಗೆ ಜಿಲ್ಲೆಯ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಇಲ್ಲಿವ ರೆಗೂ ಒಂದು ಲಕ್ಷ ಕೋಟಿ ಅನುದಾನ ತಂದಿದ್ದೇನೆ. ಸದನದಲ್ಲಿ ಮಾತನಾಡಿಲ್ಲ ಎಂದು ಹೇಳುವ ಕಾಂಗ್ರೆಸ್ ನಾಯಕರಿಗೆ ನಾಚಿಕೆಯಾಗಬೇಕು.

● ಬಂಜಾರ ಸಮುದಾಯದ ಮುನಿಸು ಚುನಾವಣೆಯಲ್ಲಿ ನಿಮಗೆ ಪರಿಣಾಮ ಬೀರಲಿದೆಯೇ?

ನನ್ನ ವಿರುದ್ಧ ಬಂಜಾರ ಸಮುದಾಯದ ಮುನಿಸು ಎಂಬುದು ಸಂಪೂರ್ಣ ಸುಳ್ಳು. ಇದು ಬಂಜಾರ ಸಮುದಾಯದ ವರ ಮಾತಲ್ಲ, ನನ್ನ ವಿರುದ್ಧ ಕಾಂಗ್ರೆಸ್ ನವರ ಅಪಪ್ರಚಾರ. ಈ ಸಮುದಾಯದ ಮತಗಳು ನನ್ನ ಬಿಟ್ಟು ಎಲ್ಲಿಯೂ ಹೋಗುವುದಿಲ್ಲ. ಸದಾ ನನ್ನೊಂದಿಗಿರುವ ಸಾಂಪ್ರದಾಯಿಕ ಮತಗಳು. 1989 ರಲ್ಲಿ ನಾನು ಚಿಕ್ಕೋಡಿ ಮತಕ್ಷೇತ್ರಕ್ಕೆ ಹೋದಾಗ ವಿಜಯಪುರದಲ್ಲಿ ಬಂಜಾರ ಸಮುದಾಯದ ಆರ್.ಕೆ.ರಾಠೋಡ ಎಂಬ ನಾಯಕನನ್ನು ಎಂಎಲ್‌ಎ ಮಾಡಿ ಹೋಗಿದ್ದೇನೆ. ಅದಕ್ಕೂ ಮೊದಲು ರಾಮು ಲಮಾಣಿ ಎಂಬ ನಾಯಕನಿಗೆ ಜಿ.ಪಂ ಟಿಕೆಟ್ ಕೊಡಿಸಿ ಎರಡು ಬಾರಿ ಗೆಲ್ಲಿಸಿದ್ದೇನೆ. ಹೀಗೆ ಬಂಜಾರ ಸಮುದಾಯದ ಏಳಿಗೆ ಗಾಗಿ ಸಾಕಷ್ಟು ಕೆಲಸ ಮಾಡಿದ್ದೇನೆ.

ವಿಜಯಪುರ ಜಿಲ್ಲೆಯ ಅಭಿವೃದ್ಧಿಗೆ ಈ ಹಿಂದೆ ಯಾವ ಕಾಂಗ್ರೆಸ್ ಸಂಸದರು ತರಲಾರದಷ್ಟು ದೊಡ್ಡ ಮೊತ್ತದ ಅನುದಾನ ತಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಮತಕ್ಷೇತ್ರದ ಜನರ ಕಣ್ಣಲ್ಲಿಲ್ಲ, ಹೃದಯದಲ್ಲಿದ್ದೇನೆ. ಇದು ನನ್ನ ಕೊನೆಯ ಚುನಾವಣೆ, ಬೇರೆಯವರಿಗೂ ರಾಜಕಾರಣದಲ್ಲಿ ಅವಕಾಶ ಸಿಗಬೇಕು. ದೇಶದ ರಕ್ಷಣೆ, ವಿಕಸಿತ ಭಾರತದ ಸಾಕಾರಕ್ಕಾಗಿ ಮೋದಿಯವರು ಮತ್ತೊಮ್ಮೆ ದೇಶದ ಪ್ರಧಾನಿಯನ್ನಾಗಿ ಮಾಡಲು ಸಂಸತ್ತಿನಲ್ಲಿ ಕೊನೆಯ ಬಾರಿ ಕೈ ಎತ್ತಬೇಕೆಂಬುದು ನನ್ನ ಕೊನೆಯ ಆಸೆ. ಜಿಲ್ಲೆಯ ಜನ ಈ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲಿಸಿ ನನ್ನನ್ನು ಅತ್ಯಧಿಕ ಮತಗಳಿಂದ ಆರಿಸಿ ತರುತ್ತಾರೆಂಬ ಆತ್ಮವಿಶ್ವಾಸವಿದೆ.
-ರಮೇಶ ಜಿಗಜಿಣಗಿ, ಬಿಜೆಪಿ ಅಭ್ಯರ್ಥಿ, ಸಂಸದ

ಚುನಾವಣೆಯಲ್ಲಿ ಮೋದಿ ಬಲ ಹೊರತುಪಡಿಸಿ, ನಿಮ್ಮ ಸ್ವಂತ ಬಲವೇನು?

ನನ್ನ ವಿಜಯಪುರ ಜಿಲ್ಲೆಯಲ್ಲಿ ನಾನೊಬ್ಬ ದಲಿತ ನಾಯಕನಾಗಿ ಸಮಾಜದಲ್ಲಿ ನಡೆದುಕೊಂಡ ಬಂದ ಹಾದಿಯೇ ನನ್ನ ಸ್ವಂತಬಲ. ಇಲ್ಲದಿದ್ದರೆ ಜನ ನನ್ನನ್ನು ಇಲ್ಲಿಯವರೆಗೂ 10 ಚುನಾವಣೆಗಳಲ್ಲಿ ಗೆಲ್ಲಿಸುತ್ತಿರಲಿಲ್ಲ. ಅಭಿವೃದ್ಧಿಯ ಬಲ ಪ್ರಧಾನಿ ನರೇಂದ್ರ ಮೋದಿಯವರಾದರೆ, ಸಮಾಜದೊಂದಿಗೆ ನಾನು ನಡೆದುಕೊಂಡು ಬಂದ ರೀತಿಯೇ ನನಗೆ ಸ್ವಂತಬಲ.

● ಜಿಲ್ಲೆಗೆ ವಿಶೇಷ ಅನುದಾನ ತಂದಿಲ್ಲವೆಂದು ಆರೋಪವಿದೆಯಲ್ಲ?

ಜಿಲ್ಲೆಯಲ್ಲಾಗಿರುವ ಏಳು ನ್ಯಾಷನಲ್ ಹೈವೆಗಳು, ರೈಲ್ವೆ ನಿಲ್ದಾಣಗಳ ಅಭಿವೃದ್ಧಿ ಹಾಗೂ ಸುಧಾರಣೆಗಳು, ವಿಮಾನ ನಿಲ್ದಾಣದಂತಹ ಅಭಿವೃದ್ಧಿ ಕಾರ್ಯಗಳಾಗಿದ್ದೆ ನಾನು ಬರೆದ ಸಹಸ್ರಾರು ಪತ್ರಗಳಿಂದ. ಒಂದೊಂದು ಅಭಿವೃದ್ಧಿ ಕೆಲಸಕ್ಕೂ ನಾನು ಬರೆದ ಪತ್ರಗಳ ದೊಡ್ಡ ಸಂಗ್ರಹಗಳಿವೆ. ವಿಜಯಪುರ ವಿಮಾನ ನಿಲ್ದಾಣ ಕಾರ್ಯ ಮೊದಲು ಗಾಢ ನಿದ್ರಾವಸ್ಥೆಯಲ್ಲಿತ್ತು. ನಾನು ಚಿಕ್ಕೋಡಿಯಿಂದ ವಿಜಯಪುರಕ್ಕೆ ಬಂದ ಮೇಲೆ ಅದಕ್ಕೆ ರಾಕೆಟ್ ವೇಗ ನೀಡಿ ಅಭಿವೃದ್ಧಿಪಡಿಸಿದ್ದು ನನ್ನ ಸ್ವಂತ ಪ್ರಯತ್ನವಲ್ಲದೇ ಮತ್ತೇನು.

● ಈ ಬಾರಿ ನಿಮಗೆ ಏಕೆಮತ ನೀಡಬೇಕು?

ವಿಕಸಿತ ಭಾರತ, ವಿಕಸಿತ ವಿಜಯಪುರ ಗುರಿಯೊಂದಿಗೆ ಮೋದಿಯವರನ್ನು 3 ನೇ ಬಾರಿ ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡುವ ಉದ್ದೇಶಕ್ಕಾಗಿಯೇ ನನಗೆ ಅವಕಾಶ ಮಾಡಿಕೊಡಬೇಕೆಂದು ಜನರಲ್ಲಿ ಕೊನೆಯಾಸೆಯಾಗಿ ಕೇಳಿಕೊಂಡಿದ್ದೇನೆ.

● ಗೆದ್ದರೆ ಏನೆಲ್ಲ ಯೋಜನೆ, ಗುರಿಗಳಿವೆ?

4ನೇ ಬಾರಿಯೂ ನನ್ನ ಗೆಲುವು ಖಚಿತ, ನನಗೆ ವಿಶ್ವಾಸವಿದೆ. ಗೆದ್ದು ಬಂದ ಮೇಲೆ ವಿಜಯಪುರ ಮತಕ್ಷೇತ್ರದಲ್ಲಿ ಇಲ್ಲಿಯವರೆಗೂ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಹೊರತುಪಡಿಸಿ, ಉಳಿದಿರುವ ಕೆಲಸಗಳ ಜೊತೆಗೆ ಮತಕ್ಷೇತ್ರದ ಜನ ಹಾಗೂ ಕಾರ್ಯಕರ್ತರನ್ನು ಕೇಳಿ ಅವರು ಹೇಳುವ ಎಲ್ಲಾ ಕೆಲಸಗಳನ್ನು ಮಾಡುತ್ತೇನೆ.

ನಾಯಕರು, ಕಾರ್ಯಕರ್ತರಿಂದ ಉತ್ಸಾಹ, ಹುಮ್ಮಸ್ಸಿನ ಪ್ರಚಾರ

ರಕ್ಷ ರಾಮಯ್ಯ ಭರ್ಜರಿ ಪ್ರಚಾರ

ನೆಲಮಂಗಲ: ನೆಲಮಂಗಲದಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷ ರಾಮಯ್ಯ ಪರವಾಗಿ ಭಾರೀ ಜನಸ್ತೋಮದ ಮೂಲಕ ಬೃಹತ್ ರೋಡ್ ಶೋ ನಡೆಯಿತು. ಸಮರೋಪಾದಿಯಲ್ಲಿ ಜನ ಸಾಗರ ಹರಿದು ಬಂತು. ಹೂವುಗಳ ಸುರಿಮಳೆ ನಡುವೆ ರೋಡ್ ಶೋ ಸಾಗಿತು.

ನೆಲಮಂಗಲ ಶಾಸಕರಾದ ಶ್ರೀನಿವಾಸ್, ಹೊಸಕೋಟೆ ಶಾಸಕರಾದ ಶರತ್ ಬಚ್ಚೇಗೌಡ, ವಿಧಾನಪರಿಷತ್ ಸದಸ್ಯರಾದ ಎಸ್. ರವಿ, ಹಿರಿಯ ಮುಖಂಡರಾದ ಕಾಂತರಾಜ್ ಅವರ ನೇತೃತ್ವದಲ್ಲಿ ಪ್ರಚಾರ ವೈಭವದಿಂದ ನಡೆಯಿತು. ಎಲ್ಲೆಡೆ ಜೈಕಾರ ಮೊಳಗಿತು. ಕಾಂಗ್ರೆಸ್ ಬಾವುಟ ರಾರಾಜಿಸಿತು. ಶಾಸಕ ಶರತ್ ಬಚ್ಚೇಗೌಡ ಮಾತನಾಡಿ, ರಕ್ಷ ರಾಮಯ್ಯ ಅವರು ಎಂ.ಎಸ್. ರಾಮಯ್ಯ ಅವರ ಕುಡಿ. ಕೋವಿಡ್ ಸಂದರ್ಭದಲ್ಲಿ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಸಹಸ್ರಾರು ಜೀವ ಉಳಿಸಿ ಪುಣ್ಯದ ಕೆಲಸ ಮಾಡಿದ್ದಾರೆ. ಆದರೆ ಕೋವಿಡ್ ಸಂಕಷ್ಟದಲ್ಲಿ ಭ್ರಷ್ಟಾಚಾರ ನಡೆಸಿದವರು ಬೇಕೋ ಎಂಬುದನ್ನು ನೀವೇ ನಿರ್ಧರಿಸಬೇಕು. ರಕ್ಷ ರಾಮಯ್ಯ ವಿರುದ್ಧ ಸ್ಪರ್ಧಿಸಿರುವವರು ಯಾರು ಎಂಬುದು ನಿಮಗೆ ಗೊತ್ತು. ಯಾರೆಂದು ನಾವು ಹೇಳಿಲ್ಲ, ಬಿಜೆಪಿಯವರೇ ಹೇಳಿದ್ದಾರೆ ಎಂದರು.

ನೆಲಮಂಗಲದಲ್ಲಿ ನಡೆದ ಬೃಹತ್ ರೋಡ್ ಶೋ ನಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷ ರಾಮಯ್ಯ ಮಾತನಾಡಿದರು.

ಬರಪರಿಹಾರ ನೀಡದ ಕೇಂದ್ರ ಸರಕಾರದ ವಿರುದ್ಧ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದ್ದು, ಪರಿಹಾರ ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ಸೂಚಿಸಿದೆ. ಬಿಜೆಪಿ ಆಡಳಿತದಿಂದ ರಾಜ್ಯಕ್ಕೆ ನ್ಯಾಯ ದೊರೆಯುವುದಿಲ್ಲ. ರಕ್ಷ ರಾಮಯ್ಯ ಅವರನ್ನು ಆರಿಸಿ ಕಳುಹಿಸಿದರೆ ಅವರು ರಾಜ್ಯಕ್ಕೆ ನ್ಯಾಯ ಒದಗಿಸಲಿದ್ದಾರೆ. ಜನರಪರವಾಗಿ ಅವರು ಕೆಲಸ ಮಾಡಲಿದ್ದಾರೆ.
-ಶರತ್ ಬಚ್ಚೇಗೌಡ, ಶಾಸಕ

ಕಾಂಗ್ರೆಸ್ ಸರಕಾರದಲ್ಲಿ ಹೆಣ್ಣುಮಕ್ಕಳ ಪ್ರಾಣಕ್ಕೆ ಬೆಲೆ ಇಲ್ಲ: ಬೊಮ್ಮಾಯಿ

ರಾಹುಲ್ ಗಾಂಧಿ ಅಸಮರ್ಥ ನಾಯಕ

ಗದಗ: ರಾಹುಲ್ ಗಾಂಧಿ ಅತ್ಯಂತ ಅಸಮರ್ಥ ನಾಯಕ. ದೇಶದ ಬಗ್ಗೆ ವಿದೇಶದಲ್ಲಿ ಅವಮಾನಕರವಾಗಿ ಮಾತನಾಡುವ ನಾಯಕ, ಹೀಗಾಗಿ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆ ಮಾಡುತ್ತಿಲ್ಲ ಎಂದು ಮಾಜಿ ಮುಖ್ಯಮಂತ್ರಿ, ಹಾಗೂ ಗದಗ ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ರೋಣ ವಿಧಾನಸಭಾ ಕ್ಷೇತ್ರದ ಡಂಬಳ ದಲ್ಲಿ ನಡೆದ ಸಮಾವೇಶದಲ್ಲಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡು ಮಾತನಾಡಿ, ಈ ಚುನಾವಣೆಯಲ್ಲಿ ನರೇಂದ್ರ ಮೋದಿ ಹಾಗೂ ರಾಹುಲ್ ಗಾಂಧಿ ನಡುವೆ ನಡೆಯುವ ಚುನಾವಣೆ. ರಾಹುಲ್ ಗಾಂಧಿ ಒಬ್ಬ ಅಸಮರ್ಥ ನಾಯಕರಾಗಿದ್ದು, ಅದೇ ಕಾರಣಕ್ಕೆ ಕಾಂಗ್ರೆಸ್ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆ ಮಾಡುತ್ತಿಲ್ಲ. ನಾವು ಮೋದಿಯವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದೇವೆ. ಜನರು ಮೋದಿಯವರನ್ನು ಆಯ್ಕೆ ಮಾಡುತ್ತಾರೆ . ಇಡೀ ದೇಶದಲ್ಲಿ ಮೋದಿ ಸುನಾಮಿ ಇದೆ. ಹಾವೇರಿ ಗದಗ ಲೋಕಸಭಾ ಕ್ಷೇತ್ರದಲ್ಲೂ ಮೋದಿಯವರ ಸುನಾಮಿ ಇದೆ ಎಂದರು.

ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿಯವರು ಗದಗ ಜಿಲ್ಲೆಯ ರೋಣ ವಿಧಾನಸಭಾ ಕ್ಷೇತ್ರದ ಡಂಬಳ ಗ್ರಾಮದಲ್ಲಿ ಏರ್ಪಡಿಸಿದ್ದ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದರು.

ರಾಜ್ಯ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಕಾನೂನಿನ ಭಯ ಇಲ್ಲ. ಪೊಲೀಸ್ ಠಾಣೆಗಳಲ್ಲಿ ರಾಜಮರ್ಯಾದೆ ಸಿಗುತ್ತಿದೆ. ಬೆಳಗಾವಿಯಲ್ಲಿ ದಲಿತ ಮಹಿಳೆಯನ್ನು ನಗ್ನ ಮಾಡಿದರು. ಹಾವೇರಿಯಲ್ಲಿ ಮುಸ್ಲಿಂ ಮಹಿಳೆಯ ಮೇಲೆ ಆರು ಜನರು ಅತ್ಯಾಚಾರ ಮಾಡುತ್ತಾರೆ. ಅವರನ್ನು ರಕ್ಷಣೆ ಮಾಡುವ ಕೆಲಸವನ್ನು ಸರಕಾರ ಮಾಡುತ್ತಿದೆ. ಹಾಡು ಹಗಲೇ ಕಾಲೇಜು ವಿದ್ಯಾರ್ಥಿನಿಯನ್ನು ಕೊಲೆ ಮಾಡಿದ್ದರೆ, ಅದೊಂದು ಸಾಮಾನ್ಯ ಸಂಗತಿ ಅಂತ ಹೇಳುತ್ತಾರೆ. ಈ ಸರಕಾರದಲ್ಲಿ ಹೆಣ್ಣು ಮಕ್ಕಳ ಮಾನ ಪ್ರಾಣಕ್ಕೆ ಬೆಲೆ ಇಲ್ಲದಂತಾಗಿದೆ.
-ಬಸವರಾಜ ಬೊಮ್ಮಾಯಿ, ಮಾಜಿಸಿಎಂ

ರಂದೀಪ್ ಸುರ್ಜೇವಾಲ ಆರೋಪ

ಬಿಜೆಪಿ ಎಂದರೆ ಹೊಸ ಈಸ್ಟ್ ಇಂಡಿಯಾ ಕಂಪನಿ

ಪ್ರಧಾನಿ ಕೀಳುಮಟ್ಟದ ಶಬ್ದ ಬಳಕೆ ನಾಚಿಕೆಗೇಡು.ಕಾಂಗ್ರೆಸ್ ಪಕ್ಷ ವಿಧಾನಸಭೆ ಚುನಾವಣೆಯಲ್ಲಿ ಐದು ಗ್ಯಾರಂಟಿಗಳನ್ನು ಘೋಷಿಸಿದಾಗ ಯಡಿಯೂರಪ್ಪ ಸೇರಿ ಬಿಜೆಪಿಯವರು ತಮಾಷೆ ಮಾಡಿದ್ದರು, ಮೋದಿಯವರು ಇವುಗಳ ಅನುಷ್ಠಾನ ಅಸಾಧ್ಯ, ಇದರಿಂದ ರಾಜ್ಯ ದಿವಾಳಿ ಆಗಲಿದೆ ಎಂದಿದ್ದರು. ಇದೀಗ ನಮ್ಮ ಗ್ಯಾರಂಟಿ ಯನ್ನ ಮೋದಿಯವರು ಕದ್ದು ಪ್ರಚಾರ ಮಾಡುತ್ತಿದ್ದಾರೆ. ರಾಜ್ಯದ ಗ್ಯಾರಂಟಿಗಳ ಬಗ್ಗೆ ಬಿಜೆಪಿಯವರು ಚರ್ಚೆಗೆ ಬರಲಿ.
-ರಂದೀಪ್ ಸುರ್ಜೇವಾಲ, ಕಾಂಗ್ರೆಸ್ ರಾಜ್ಯ ಉಸ್ತುವಾರಿ

ಹುಬ್ಬಳ್ಳಿ: ಬಿಜೆಪಿ ಎಂದರೆ ಹೊಸ ಈಸ್ಟ್ ಇಂಡಿಯಾ ಕಂಪೆನಿಯಾಗಿದೆ, ದ್ವಂದ್ವತೆ, ಜನರನ್ನು ಒಡೆದಾಳುವ ನೀತಿ, ವಿಭಜನೆ ಬಿಜೆಪಿ ಡಿಎನ್‌ಎನಲ್ಲಿಯೇ ಇದೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಂದೀಪ್ ಸುರ್ಜೇವಾಲ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 2014ರಲ್ಲಿ ನೀಡಿದ್ದ ಯಾವುದಾದರು ಭರವಸೆಯನ್ನು ಬಿಜೆಪಿ ಈಡೇರಿಸಿದೆಯೇ. ಅದು ಸ್ವಾಮಿನಾಥನ್ ವರದಿ ಅನುಷ್ಠಾನವಿರಲಿ, ವಿದೇಶಗಳಿಂದ ಕಪ್ಪು ಹಣ ತಂದು ಜನರಿಗೆ ಹಂಚುವುದಿರಲಿ ಯಾವುದು ಮಾಡಿದ್ದಾರೆ. ಅವರು ಮಾಡಿದ್ದು ಒಂದೇ, ಭಾವನೆಗಳನ್ನು ಕೆರಳಿಸುವುದು, ಬ್ರಿಟಿಷ ರಂತೆ ಒಡೆದಾಳುವ ನೀತಿ ಅನುಸರಿಸುವುದು.ರಾಜ್ಯದಲ್ಲಿ ಲೋಕಸಭಾ ಚುನಾವಣೆ ಎರಡು ಮಾಡೆಲ್ ನಲ್ಲಿ ನಡೆಯುತ್ತಿದೆ ಒಂದು ಕಾಂಗ್ರೆಸ್ ನ ಗ್ಯಾರಂಟಿ ಇನ್ನೊಂದು ಬಿಜೆಪಿಯ ಖಾಲಿ ಚೊಂಬು ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಂದೀಪ್ ಸುರ್ಜೇವಾಲ ಕಿಡಿ ಕಾರಿದರು.

ರೈತರಿಗೆ ಕೊಡಲು ಸರಕಾರದ ಬಳಿ ಹಣ ಇಲ್ಲ: ವಿಜಯೇಂದ್ರ

ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸಲು ಕಾಂಗ್ರೆಸ್‌ನಿಂದ ಯತ್ನ

ಶಿವಮೊಗ್ಗ: ರಾಜ್ಯದಲ್ಲಿ ಖಜಾನೆ ಸಂಪೂರ್ಣ ಖಾಲಿಯಾಗಿದೆ. ರೈತರಿಗೆ ಕೊಡಲು ಸರಕಾರದ ಬಳಿ ಹಣ ಇಲ್ಲ, ಹೀಗಾಗಿ ಬರ ಪರಿಹಾರ ನೀಡಿಕೆ ವಿಚಾರದಲ್ಲಿ ಕೇಂದ್ರವನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲು ಪ್ರಯತ್ನಿಸುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಖಜಾನೆ ಬರಿದಾಗಿರುವ ಕಾರಣ ಪರಿಶಿಷ್ಟರ ಪಾಲಿನ ಎಸ್‌ಇಪಿ, ಟಿಎಸ್ಪಿ ಹಣವನ್ನು ರಾಜ್ಯ ಸರಕಾರ, ಬೇರೆ ಯೋಜನೆಗೆ ವರ್ಗಾವಣೆ ಮಾಡಿಕೊಂಡಿದೆ. ರೈತರಿಗೆ ಬರ ಪರಿಹಾರ ಕೊಡಲು ಹಣ ಇಲ್ಲ. ಮುಂದಿನ ದಿನಗಳಲ್ಲಿ ಸರಕಾರಿ ನೌಕರರಿಗೆ ಸಂಬಳ ಕೊಡಲು ಹಣ ಇರುವುದಿಲ್ಲ ಎಂದು ಭವಿಷ್ಯ ನುಡಿದರು.

ರೈತರಿಗೆ ಬರ ಪರಿಹಾರ ಕೊಡೊಲ್ಲ ಎಂದು ಕೇಂದ್ರ ಸರಕಾರ ಯಾವತ್ತೂ ಹೇಳಿಲ್ಲ. ಪರಿಹಾರ ಬಿಡುಗಡೆಗೆ ಅದರದ್ದೇ ಆದ ಮಾನದಂಡ ಇದೆ. ಕಾಲಾವಕಾಶ ಬೇಕಾಗುತ್ತದೆ. ಹೀಗಾಗಿ ತಡವಾಗಿದೆ. ಈ ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗಲೂ ಕೇಂದ್ರದಿಂದ ನೆರೆ ಪರಿಹಾರದ ವಿತರಣೆ ವಿಳಂಬವಾಗಿತ್ತು. ಆಗಲೂ ಕೇಂದ್ರದಲ್ಲಿ ಬಿಜೆಪಿಯೇ ಅಧಿಕಾರದಲ್ಲಿದ್ದರೂ ತಡ ಆಗಿತ್ತು. ಯಡಿಯೂರಪ್ಪ ಆಗ ಕೇಂದ್ರದ ನೆರವಿಗೆ ಕಾಯದೇ ರಾಜ್ಯದ ಖಜಾನೆಯಿಂದಲೇ ಸಂತ್ರಸ್ತರಿಗೆ ಪರಿಹಾರ ಕೊಟ್ಟಿದ್ದರು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದೇಕೆ? ಎಂದು ಪ್ರಶ್ನಿಸಿದರು.

ಅಲ್ಪಸಂಖ್ಯಾತರ ಕಲ್ಯಾಣಕ್ಕೆ 10 ಸಾವಿರ ಕೋಟಿ ಕೊಡುವುದಾಗಿ ಹೇಳಿ ಸಿದ್ದರಾಮಯ್ಯ ತಕ್ಷಣ 2 ಸಾವಿರ ಕೋಟಿ ಬಿಡುಗಡೆ ಮಾಡುತ್ತಾರೆ. ಆದರೆ ರೈತರಿಗೆ ಬರ ಪರಿಹಾರ ಕೊಡಲು ಯಾಕೆ ಮೀನಾಮೇಷ ಎಣಿಸುತ್ತಿದ್ದಾರೆ. ಅದರಲ್ಲೂ ರಾಜಕಾರಣ ಮಾಡುವ ಪ್ರಯತ್ನ ಏಕೆ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ತೋರುತ್ತಿರುವ ಉತ್ಸಾಹವನ್ನು ಸಿದ್ದರಾಮಯ್ಯ ಸಂಕಷ್ಟದಲ್ಲಿರುವ ರೈತರ ವಿಚಾರದಲ್ಲೂ ತೋರಿಸಬಹುದಿತ್ತು.
-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

₹431.07 ಕೋಟಿ ಮೌಲ್ಯದ ನಗದು, ಮದ್ಯ ಚಿನ್ನ ಮತ್ತಿತರೆ ವಸ್ತುಗಳ ವಶ

ಭಾರೀ ಚುನಾವಣಾ ಅಕ್ರಮ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಪ್ರತಿಷ್ಠೆಯ ಕಣವಾಗಿರುವ ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಅಕ್ರಮಗಳು ಸಾಕಷ್ಟು ಪ್ರಮಾಣದಲ್ಲಿ ನಡೆದಿದ್ದು, ಚುನಾವಣಾ ಆಯೋಗ ದಾಖಲೆಯ 431.07 ಕೋಟಿ ರು. ಮೌಲ್ಯದ ನಗದು, ಮದ್ಯ ಸೇರಿದಂತೆ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿದೆ.

ಲೋಕಸಭೆ ಚುನಾವಣಾ ನೀತಿ ಸಂಹಿತೆ ಜಾರಿಯಾದ ಬಳಿಕ ಈವರೆಗೆ ರಾಜ್ಯದಲ್ಲಿ ಇಷ್ಟೊಂದು ಪ್ರಮಾಣದ ಅಕ್ರಮಗಳನ್ನು ಅಬಕಾರಿ, ಆದಾಯ ತೆರಿಗೆ, ವಾಣಿಜ್ಯ ತೆರಿಗೆ, ಪೊಲೀಸ್, ಕ್ಷಿಪ್ರ ಕಾರ್ಯಪಡೆಗಳು ಸ್ಥಿರ ಕಣ್ಗಾವಲು ತಂಡಗಳ ನೆರವಿನೊಂದಿಗೆ ಚುನಾವಣಾ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

ವಶಪಡಿಸಿಕೊಳ್ಳಲಾದ ವಸ್ತುಗಳ ಪೈಕಿ ಮದ್ಯ ಅತಿ ಹೆಚ್ಚು ಪ್ರಮಾಣದಲ್ಲಿದ್ದು, 177.84 ಕೋಟಿ ರು. ಮೌಲ್ಯದ 147.10 ಲಕ್ಷ ಲೀಟರ್ ಮದ್ಯ ಜಪ್ತಿ ಮಾಡಲಾಗಿದೆ. 83.21 ಕೋಟಿ ನಗದು ಪತ್ತೆಯಾಗಿದ್ದರೆ, 73.80 ಕೋಟಿ ರು. ಮೌಲ್ಯದ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ.

ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಕ್ಷಿಪ್ರ ಪಡೆಗಳು, ಪೊಲೀಸರು, ಸ್ಥಿರ ಕಣ್ಗಾವಲು ಪಡೆಗಳು 2,066 ಎಫ್‌ಐಆರ್‌ಗಳನ್ನು ದಾಖಲಿಸಿದ್ದರೆ, ಅಬಕಾರಿ ಇಲಾಖೆಯವರು 34,496 ಪ್ರಕರಣಗಳನ್ನು ದಾಖಲಿಸಿ 1,837 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲದೆ, ಮತದಾರರ ಸಹಾಯವಾಣಿ ಮೂಲಕ 29,147, ಎನ್‌ಜಿಆರ್‌ಎಸ್ ಪೋರ್ಟಲ್‌ನಲ್ಲಿ 17,313 ಹಾಗೂ ಸಿ ವಿಜಿಲ್ ಆ್ಯಪ್ ಮೂಲಕ 27,836 ದೂರುಗಳನ್ನು ಸ್ವೀಕರಿಸಲಾಗಿದೆ.

ನಗದು	85.21 ಕೋಟಿ ರು.
ಮದ್ಯ	177.84 ಕೋಟಿ ರು.
ಡ್ರಗ್ಸ್	11.32 ಕೋಟಿ ರು.
ಚಿನ್ನ	73.80 ಕೋಟಿ ರು.
ಬೆಳ್ಳಿ	1.18 ಕೋಟಿ ರು.
ವಜ್ರ	1.22 ಕೋಟಿ ರು.
ಉಡುಗೊರೆ	8.14 ಕೋಟಿ ರು.
ಇತರೆ	72.36 ಕೋಟಿ ರು.
ಒಟ್ಟು	431.07 ಕೋಟಿ ರು.

ಬರಗಾಲದಲ್ಲಿ ರೈತ ಕೊಳವೆ ಬಾವಿ ಕೊರೆದು ವಿದ್ಯುತ್ ಸಂಪರ್ಕ ಪಡೆಯಲು 3ಲಕ್ಷ ಕಟ್ಟಬೇಕು. ಯಾವುದೇ ನೀರಾವರಿ ಸೌಲಭ್ಯಗಳಿಲ್ಲದ ಬರಪೀಡಿತ ಪ್ರದೇಶದಲ್ಲಿ ಕೊಳವೆ ಬಾವಿಗಳಿಂದ ಮಾತ್ರ ಕೃಷಿ ಮಾಡಲು ಸಾಧ್ಯ. ಇದು ರೈತರಿಗೆ ಅನುಕೂಲ ಮಾಡಿದ ಸರಕಾರವೇ? ರೈತರ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್ ರೈತರಿಗೆ ಅನ್ಯಾಯ ಮಾಡುತ್ತಿದೆ. ಗ್ಯಾರಂಟಿಗಳಿಗೆ ಹಣ ಒದಗಿಸಲು ಜನಸಾಮಾನ್ಯರ ಕಿಸೆಯಿಂದಲೇ ಹಣ ಕೀಳಲಾಗುತ್ತಿದೆ.
-ಎಂ.ಕೃಷ್ಣಾರೆಡ್ಡಿ , ಮಾಜಿ ಶಾಸಕ

ಕಾಂಗ್ರೆಸ್ ಗ್ಯಾರಂಟಿಗಳಿಗೆ ಉತ್ತಮ ಬೆಂಬಲ ಸಿಗುತ್ತಿದೆ. 8 ತಿಂಗಳಲ್ಲಿಯೇ ಎಲ್ಲ ಗ್ಯಾರಂಟಿ ಯೋಜನೆ ಜಾರಿ ಮಾಡಿದ್ದು ಕಾಂಗ್ರೆಸ್. ಈ ಬಾರಿ ಜನರು ಬದಲಾವಣೆ ಬಯಸುತ್ತಿದ್ದಾರೆ. ಜನರ ನಾಡಿಮಿಡಿತ ತಿಳಿದುಕೊಂಡವರಿಗೆ ಮತ ನೀಡಲು ನಿರ್ಧರಿಸಿದ್ದಾರೆ. ನನ್ನ ಕುಟುಂಬಕ್ಕೆ ಆಗಿರುವ ಅನ್ಯಾಯವನ್ನು ಜನರ ಮುಂದಿಡುತ್ತಿದ್ದೇನೆ. ಇದೆಲ್ಲದರ ಪರಿಣಾಮ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಉತ್ತಮ ಬೆಂಬಲ ಸಿಗುತ್ತಿದೆ. ಈ ಬಾರಿ ಗೆಲ್ಲುವ ವಿಶ್ವಾಸ ಹೆಚ್ಚಾಗಿದೆ.
ಶ್ರೇಯಸ್ ಪಾಟೀಲ್, ಕಾಂಗ್ರೆಸ್ ಅಭ್ಯರ್ಥಿ

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಕಾಂಗ್ರೆಸ್ ಸರಕಾರ ಕೊಟ್ಟ ಮಾತಿಗೆ ನಡೆದುಕೊಂಡಿ ದೆ. ಈ ಹಿಂದಿನ ಎಲ್ಲಾ ಕಾಂಗ್ರೆಸ್ ಸರ್ಕಾರಗಳಲ್ಲೂ ನಾವು ಪ್ರಣಾಳಿ ಕೆಯನ್ನು ನೆರವೇರಿಸಿದೀವಿ. ಸಂವಿಧಾನದ ಮೌಲ್ಯಗಳನ್ನು ಕಾಂಗ್ರೆಸ್ ಎತ್ತಿ ಹಿಡಿಯುತ್ತದೆ. ಶ್ರೀರಾಮುಲು ನಾಲ್ಕು ಬಾರಿ ಸಂಸದರಾಗಿ ವಿಫಲರಾಗಿದಾರೆ. ಕರ್ನಾಟಕ ಅತಿಹೆಚ್ಚು ತೆರಿಗೆ ಕಟ್ಟುವ ದೇಶ. ನೀತಿ ಆಯೋಗವನ್ನೇ ಬಿಜೆಪಿಯವರು ತೆಗೆದು ಹಾಕಿದಾರೆ. ಬರ ಪರಿಹಾರದ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ಛೀಮಾರಿ ಹಾಕಿದೆ
-ತುಕಾರಾಂ , ಕಾಂಗ್ರೆಸ್ ಅಭ್ಯರ್ಥಿ



ರಾಷ್ಟ್ರಕ್ಕೆ ಹೆಚ್ಚು ಆದಾಯ ತರುವ ಮೀನುಗಾರಿಕೆಯ ಅಭಿವೃದ್ದಿಯ ಬಗ್ಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಮುಖ್ಯವಾಗಿ ಈ ಭಾಗದ ಮೀನುಗಾರರ ಮತ್ತು ರೈತರ ಸಮಸ್ಯೆಗಳಿಗೆ ಸ್ಪಂದಿಸಲಿಕ್ಕೆ ಅನೇಕ ಯೋಜನೆಗಳನ್ನು ರೂಪಿಸಲಾಗುವುದು. ಈ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ತರಲಾಗುವುದು .ನಾಯಕರ ಹೆಸರಿನಲ್ಲಿ ಮತ ಕೊಟ್ಟರೆ ಕಳೆದ 10 ವರ್ಷ ಕ್ಷೇತ್ರಕ್ಕೆ ಆಗಿರುವ ಅನ್ಯಾಯವೇ ಮರುಕಳಿಸುತ್ತದೆ. ಈ ಬಾರಿ ಕೆಲಸ ಮಾಡುವವರಿಗೆ ಮತ ಕೊಡಿ.
-ಜಯಪ್ರಕಾಶ್ ಹೆಗ್ಡೆ , ಕಾಂಗ್ರೆಸ್ ಅಭ್ಯರ್ಥಿ



ಕಾವೇರಿ ಸಮಸ್ಯೆ ಇದೆ, ಅದು ಜೀವನ್ಮರಣದ ಪ್ರಶ್ನೆ. ಮಂಡ್ಯದಲ್ಲಿ ಕೈ ಅಭ್ಯರ್ಥಿ ಗೆಲ್ಲಲು 140 ಕೋಟಿ ಎನ್‌ಓಸಿ ರಿಲೀಸ್ ಮಾಡಿದ್ದಾರೆ. ದೇಶದ ಸಂಪತ್ತನ್ನು ಹಂಚುತ್ತೇವೆ ಎಂದು ಕಾಂಗ್ರೆಸ್‌ನವರು ಜಗಳವಾಡುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬರಲು ಶಕ್ತಿನೇ ಇಲ್ಲ. ಆದರೆ ಮನಸ್ಸಿಗೆ ಬಂದಂತೆ ಮಾತನಾಡುತ್ತಾರೆ . ಭೂಮಿ, ಸಂಪತ್ತನ್ನು ಹಂಚುತ್ತೇವೆ ಎಂದು ರಾಹುಲ್ ಗಾಂಧಿ ಹೇಳ್ತಾರೆ. ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟ ಎಲ್ಲಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದ್ದೇನೆ.
ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ